ಗುಂಪಿನ ಆಚೆ ನಿಂತಿದ್ದ ಜಯರಾಮನಿಗೆ ಇದೆಲ್ಲವೂ ನಿಚ್ಚಳವಾಗಿ ಕಾಣುತ್ತಿತ್ತು. ಅವನ ಮುಖದಲ್ಲಾದ ಬದಲಾವಣೆಯನ್ನು ನಾನು ಗಮನಿಸುತ್ತಿದ್ದೆ. ಅವನು ಏನನ್ನು ನೋಡುತ್ತಿದ್ದನೋ ಅದನ್ನೇ ನಿಜವೆಂದು ನಂಬಲು ಅವನ ಕಣ್ಣುಗಳು ನಿರಾಕರಿಸುತ್ತಿದ್ದವು! ಯಾವುದೋ ಒಂದು ಕಠೋರ ನಿರ್ಧಾರ ಅವನ ಕಣ್ಣುಗಳ ಮೂಲಕ ಹೊರಬಂದಿತು. ಅಲ್ಲೇ ಬಿದ್ದಿದ್ದ ಒಂದೆರೆಡು ಕಲ್ಲುಗಳನ್ನು ತಗೆದುಕೊಂಡು ರೊಯ್ಯನೆ ಗುಂಪಿನ ಮೇಲೆ ಬೀಸಿದ. ಬೀಸಿದ ರಭಸಕ್ಕೆ ಕಲ್ಲು ಯಾರ ತಲೆಗೋ ಬಡಿದು ಅಲ್ಲಿಂದ 'ಅಯ್ಯಯ್ಯೋ!' ಎಂಬ ಉದ್ಗಾರ ಕೇಳಿಸಿತು. ಜಯರಾಮ ಎಸೆದ ಇನ್ನೆರೆಡು ಕಲ್ಲುಗಳು ಇನ್ನೆರೆಡು ತಲೆಗಳಿಗೆ ಗಾಯ ಮಾಡಿದವು. ಜಯರಾಮ ಅಲ್ಲಿಂದ ಓಡಿದ. ಜಯರಾಮನೊಳಗೆ ಇಂತಹ ಪ್ರತಿರೋಧದ ಶಕ್ತಿ ಇದೆಯೆಂದು ತಿಳಿದಿದ್ದು ಆಗಲೇ! ಅವನ ಹಿಂದೆ ಗುಂಪಿನ ಇಬ್ಬರು ಮೂವರು ಅವನನ್ನು ಅಟ್ಟಿಸಿಕೊಂಡು ಹೋದರು. ಯಾರೇ ಹೋದರೂ ಜಯರಾಮ ಯಾರ ಕೈಗೂ ಸಿಗುವುದಿಲ್ಲ ಎನ್ನುವುದು ನನಗೆ ಗೊತ್ತಿತ್ತು.

'ಜಯರಾಮ ನೀನು ಎಲ್ಲೇ ಇದ್ದರೂ ನನ್ನ ಪ್ರಾರ್ಥನೆ ಯಾವಾಗಲೂ ನಿನಗಾಗಿಯೇ ಇರುತ್ತದೆ'

ಪೋಲೀಸರು ರೋಷದಿಂದ ದೊಡ್ಡಹನುಮನ ಮೇಲೆ ಕೈ ಮಾಡಿದರು. ಅವನ ದೇಹದ ಮೇಲೆಲ್ಲಾ ಪೋಲೀಸರಏಟುಗಳುಮೂಡಿದವು.ದೊಡ್ಡಹನುಮನ ದೇಹವನ್ನು ಅವರು ಒಂದು ಕಲ್ಲುಬಂಡೆಯ ರೂಪಕ್ಕೆ ತಂದಿದ್ದರು. ಅವರ ಪ್ರತಿಯೊಂದು ಹೊಡೆತವೂ ಅಹಂಕಾರಪೂರಿತವಾಗಿತ್ತು. ಇದನ್ನೆಲ್ಲಾ ನೋಡುತ್ತಾ ನೋಡುತ್ತಾ ಅರಿವಿಲ್ಲದಂತೆ ನನ್ನ ಕಣ್ಣುಗಳಲ್ಲಿ ನೀರು ತುಂಬಿತು. ಮನೆಯೊಳಗೆ ಹೋಗಿ ಬಾಗಿಲು ಮುಚ್ಚಿದೆ.

ಚಳಿಗಾಲದ ಸಂಜೆಯ ಮಬ್ಬು ಇಡೀ ಗುಂಪನ್ನು ಮರೆಮಾಡಿತು.

* * *

ಈ ಘಟನೆಯ ನಂತರ ಜಯರಾಮ ಶಾಲೆಗೆ ಬರಲಿಲ್ಲ. ಆದರೂ ಅವನು ಬರುವ ದಾರಿಯನ್ನೇ ದಿನವೂ ನೋಡುತ್ತಿದ್ದೆ. ಆದರೆ, ಅದೇ ಖಾಲಿಯಾದ ದಾರಿ ದಿನವೂ ಕಾಣುತ್ತಿತ್ತು. ಏಳನೇ ತರಗತಿ ಪಾಸಾಗುವ ಹೊತ್ತಿಗೆ ನನ್ನ ತಂದೆಗೆ ಮುಂಬಡ್ತಿ ಮೇಲೆ ಜಿಲ್ಲಾ ಕೇಂದ್ರಕ್ಕೆ ವರ್ಗವಾಯಿತು. ಇದರಿಂದಾಗಿ ನಮ್ಮ ಕುಟುಂಬ ಜಿಲ್ಲಾ ಕೇಂದ್ರಕ್ಕೆ ಬಂದು ತಳವೂರಿತು. ಇನ್ನು ಉಳಿದಿದ್ದೆಲ್ಲವೂ ಬದಲಾಗುವ ಕ್ಯಾಲೆಂಡರಿನಂತೆ ನಡೆಯಿತು. ಹತ್ತಾರು ವಸಂತಗಳು, ಹತ್ತಾರು ಮಳೆಗಾಲಗಳು ಕಳೆದವು. ಅಷ್ಟುಹೊತ್ತಿಗೆ ನಾನು ಇಂಗ್ಲಿಷ್ ಸಾಹಿತ್ಯದಲ್ಲಿ ಎಂಎ ಪದವಿ ಪಡೆದಿದ್ದೆ. ತಂದೆ ನೋಡಿದ ಹುಡುಗನೊಂದಿಗೆ ನನ್ನ ಮದುವೆಯಾಯಿತು. ನನ್ನ ಪತಿ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದರು. ಮದುವೆಯಾಗಿ ಎರಡು ಮೂರು ವರ್ಷವಾದರೂ ನಮಗೆ ಮಕ್ಕಳಾಗಲಿಲ್ಲ. ನನ್ನ ಬದುಕಿನ ನರಕದ ದಿನಗಳು ಆಗ ಆರಂಭಗೊಂಡವು. ಪ್ರತಿನಿತ್ಯ ಅತ್ತೆ, ಮಾವರ ನಿಂದನೆ. ಗಂಡನ ತಾತ್ಸಾರ. ಎಲ್ಲವೂ ನನ್ನನ್ನು ಮಾನಸಿಕವಾಗಿ ಕುಗ್ಗಿಸಿದವು. ಕೊನೆ ಕೊನೆಗೆ ನನ್ನ ಗಂಡ ಮನೆಗೆ ಸರಿರಾತ್ರಿಯಲ್ಲಿ ಬರುತ್ತಿದ್ದ. ಇದು ಸಾಲದೆಂಬಂತೆ ಅವನು ಕುಡುಕ ಬೇರೆ! ಎಡಬಿಡದೆ ಸಿಗರೇಟು ಸೇದುತ್ತಿದ್ದ. ಅವನು ಸೇದುತ್ತಿದ್ದ ಸಿಗರೇಟು ವಾಸನೆ ತಡೆಯಲಾರದೆ ನನಗೆ ವಾಕರಿಕೆ ಬರುವಂತಾಗುತ್ತಿತ್ತು. ಅಕ್ಕರೆಯಿಲ್ಲದ ಮಾತು, ಒಲುಮೆಯಿಲ್ಲದ ಹಾಸಿಗೆ, ನಿರ್ಲಕ್ಷ್ಯತನ ಎಲ್ಲವೂ ದಿನೇ ದಿನೇ ಕ್ರೌರ್ಯದ ರೂಪ ತಾಳುತ್ತಿದ್ದವು. ಕೇವಲ ಮಕ್ಕಳನ್ನು ಹೆರುವುದಕ್ಕಾಗಿಯೇ ಅವನು ನನ್ನನ್ನು ಮದುವೆಯಾಗಿರುವಂತೆ ಕಾಣುತ್ತಿತ್ತು. ಗಂಡಿನ ದಬ್ಬಾಳಿಕೆಗೆ ಒಳಗಾಗದ ಅನೇಕ ಹೆಣ್ಣುಗಳಲ್ಲಿ ನಾನೂ ಒಬ್ಬಳಾಗಿದ್ದೆ.

ಅತ್ತೆ, ಮಾವ ಮತ್ತು ಗಂಡ ಎಲ್ಲರೂ ತಮ್ಮ ಕುಟುಂಬದ ಕಷ್ಟಗಳಿಗೆಲ್ಲ ನಾನೆ ಕಾರಣ ಎಂದು ಭಾವಿಸಿದರು. ಇದರಿಂದಾಗಿ ನನ್ನ ಅತ್ತೆ, ಮಾವ ನನ್ನನ್ನು ಇನ್ನಷ್ಟು ಹಿಂಸಿಸಿದರು. ಕೊನೆಗೆ ಇನ್ನು ಇವರೊಡನೆ ಬಾಳುವೆ ಮಾಡುವುದು ಸಾಧ್ಯವಿಲ್ಲ ಎನಿಸಿತು. ಒಂದು ದಿನ ಅದು ನಡೆದೇ ಹೋಯಿತು! ನನ್ನ ಗಂಡ ನನ್ನ ಮೇಲೆ ಕೈ ಮಾಡಿದ. ಅವನ ಹೊಡೆತಕ್ಕೆ ನನ್ನ ಕೆನ್ನೆ ಊದಿಕೊಂಡಿತು. ಬೆನ್ನಮೇಲೆ ಬರೆಗಳು ಕಾಣಿಸಿಕೊಂಡವು. ತುಟಿ ಒಡೆದು ರಕ್ತ ಹೆಪ್ಪುಗಟ್ಟಿತ್ತು. ಅತ್ತೆ, ಮಾವ ಮತ್ತು ನನ್ನ ಗಂಡ ನನ್ನನ್ನು ಉಟ್ಟಬಟ್ಟೆಯಲ್ಲಿ ಹೊರಗೆ ಕಳುಹಿಸಿದರು. ಹೆಣ್ಣಿಗೆ ನೋವುಗಳನ್ನೆಲ್ಲಾ ಸಹಿಸಿಕೊಳ್ಳುವ ಶಕ್ತಿ ಹೇಗೆ ಬರುತ್ತದೆ ಎಂದು ಆಗ ನನಗೆ ತಿಳಿಯಿತು. ಅಸಹಾಯಕಳಾಗಿ ಆ ರಾತ್ರಿ ನಾನು ಯಾರದೋ ಸಹಾಯ ಪಡೆದು ನನ್ನ ತವರುಮನೆಗೆ ಬಂದೆ. ನಡೆದದ್ದೆಲ್ಲವನ್ನೂ ನನ್ನ ತಂದೆ,